ನನಗೆ ಸುಧಾರಣೆಯಲ್ಲಿ ನಂಬಿಕೆಯಿಲ್ಲ. ನನಗೆ ಬೆಳವಣಿಗೆಯಲ್ಲಿ ನಂಬಿಕೆಯುಂಟು. ನಾನು ದೇವರ ಸ್ಥಾನದಲ್ಲಿ ನಿಂತು ಸಮಾಜಕ್ಕೆ 'ಹೀಗೆ ಚಲಿಸಬೇಕು' ಎಂದು ಅಪ್ಪಣೆ ಮಾಡಲಾರೆ. ರಾಮನು ಸೇತುವೆಯನ್ನು ಕಟ್ಟುವಾಗ ಇದ್ದ ಅಳಿಲಿನಂತೆ ನಾನು ಇರಬೇಕೆಂದು ಬಯಸುವೆನು. ಅದು ತನ್ನ ಪಾಲಿಗೆ ಬಂದ ಮರಳನ್ನು ಸೇತುವೆಗೆ ಕೊಡಹಿ ಧನ್ಯವಾಗುತ್ತಿತ್ತು. ಇದು ನನ್ನ ಸ್ಥಿತಿ.

"ಎಲ್ಲಿ ಮತಭ್ರಾಂತರಾದ ಸುಧಾರಕರಿದ್ದಾರೋ ಅವರೆಲ್ಲಾ ತಮ್ಮ ಗುರಿಯನ್ನೇ ಕಳೆದುಕೊಂಡರು ಎಂಬುದನ್ನು ಚರಿತ್ರೆಯು ತೋರಿಸಿದೆ.

'ನಮ್ಮಲ್ಲಿ ದೋಷಗಳಿವೆ ಎಂದು ನಾವು ಒಪ್ಪಿಕೊಳ್ಳುತ್ತೇವೆ. ಎಲ್ಲರೂ ದೋಷವನ್ನೇ ತೋರಬಹುದು; ಆದರೆ ಯಾರು ಅದರಿಂದ ಪಾರಾಗಲು ಮಾರ್ಗವನ್ನು ತೋರಬಲ್ಲರೋ ಅವರೇ ಮಾನವ ಬಂಧುಗಳು.

"ಆರೋಗ್ಯಕರವಾದ ಬಲವಾದ ಪ್ರಜಾಭಿಪ್ರಾಯವನ್ನು ಸೃಷ್ಟಿಸುವುದಕ್ಕೆ ಬಹಳ ಕಾಲ ಹಿಡಿಯುವುದು. ಅಲ್ಲಿಯವರೆಗೆ ನಾವು ಕಾಯಬೇಕು. ಸಮಾಜ ಸುಧಾರಣೆ ಸಮಸ್ಯೆಯೆಲ್ಲಾ ಹೀಗೆ ಆಗುವುದು. ಯಾರಿಗೆ ಸುಧಾರಣೆ ಬೇಕಾಗಿದೆಯೋ ಮೊದಲು ಅವರನ್ನು ಅಣಿಮಾಡಿ.

"ನೀವು ಸಮಸ್ಯೆಯ ಮೂಲಕ್ಕೆ ಹೋಗಬೇಕು. ಇದನ್ನೇ ನಾನು ಆಮೂಲಾಗ್ರ ಸುಧಾರಣೆ ಎನ್ನುವುದು.

"ಇತರ ರಾಷ್ಟ್ರಗಳ ಸಾಮಾಜಿಕ ಸಂಸ್ಥೆಗಳನ್ನು ನಾನು ಅಲ್ಲಗಳೆಯುವುದಿಲ್ಲ. ಅವು ಅವರಿಗೆ ಒಳ್ಳೆಯದು, ನಮಗಲ್ಲ. ಅವರ ಅಮೃತ ನಮಗೆ ವಿಷವಾಗಬಹುದು. ನಾವು ಕಲಿಯ ಬೇಕಾದ ಮೊದಲನೆಯ ನೀತಿಯೇ ಇದು. ಅವರ ವೈಜ್ಞಾನಿಕ ಸಮಾಜದ ಸಂಸ್ಕಾರಕ್ಕೆ ತಕ್ಕಂತೆ ಈಗ ಅವರ ಆಚಾರ ವ್ಯವ ಹಾರಗಳಿವೆ. ಸಹಸ್ರಾರು ವರುಷಗಳ ನಮ್ಮ ಕರ್ಮಕ್ಕೆ ಅನು ಗುಣವಾಗಿ ನಾವು ಬೆಳೆಯಬೇಕಾಗಿದೆ." (ನನ್ನ ಸಮರನೀತಿ: ಸ್ವಾಮಿ ವಿವೇಕಾನಂದರ ಕೃತಿಶ್ರೇಣಿ, ಸಂ.೩, ಪುಟ.೪೮-೪೯)

**(ಮುಂದುವರೆಯುವುದು)**

## ಕೇಳಿ ತಿಳಿಯಿರಿ

**[ಈ ಬಾರಿ ಸಾಧಕರ ಪ್ರಶ್ನೆಗಳಿಗೆ ಉತ್ತರಗಳನ್ನು ನೀಡಿರುವವರು ಮೈಸೂರಿನ ಶ್ರೀರಾಮಕೃಷ್ಣ ಆಶ್ರಮದ ನೂತನ ಅಧ್ಯಕ್ಷರಾಗಿರುವ ಸ್ವಾಮಿ ನಿತ್ಯಸ್ಥಾನಂದಜಿಯವರು. ಓದುಗರು ತಮ್ಮ ಆಧ್ಯಾತ್ಮಿಕ ಜೀವನಕ್ಕೆ ಸಂಬಂಧಿಸಿದ ಪ್ರಶ್ನೆಗಳನ್ನು ಸ್ಫುಟವಾಗಿ ಕೆಲವೇ ವಾಕ್ಯಗಳಲ್ಲಿ ಬರೆದು ಈ ಪತ್ರಿಕೆಯ ವಿಳಾಸಕ್ಕೆ ಕಳುಹಿಸಬಹುದು.]**

**ಭಕ್ತನಿಗೂ ಸಾಧಕನಿಗೂ ಏನು ವ್ಯತ್ಯಾಸ? ಯಾವ ಮಟ್ಟದಲ್ಲಿ (ಸ್ಥಿತಿಯಲ್ಲಿ) ಭಕ್ತ ಸಾಧಕನೆನಿಸಿಕೊಳ್ಳುತ್ತಾನೆ? ಸಾಧನೆಯ ಅಳತೆಗೋಲು ಯಾವುದು?**

ಸಾಧಾರಣ ಅರ್ಥದಲ್ಲಿ ದೇವರಲ್ಲಿ ಶ್ರದ್ಧೆಯುಳ್ಳವರನ್ನು, ದೇವಾಲಯಗಳಿಗೆ ಹೋಗುವವರನ್ನು ಮತ್ತು ಧಾರ್ಮಿಕ ಆಚರಣೆಗಳಲ್ಲಿ ತೊಡಗಿರುವವರನ್ನು ಭಕ್ತರು ಎಂದು ಕರೆಯಬಹುದು. ಭಕ್ತ ಎಂದರೆ ದೇವರನ್ನು ಭಜಿಸುವವನು ಅಥವಾ ಸ್ಮರಿಸುವವನು ಎಂದು ಅರ್ಥ. ದೇವರ ಮೇಲಿನ ಪ್ರೀತಿಯಿಂದ ದೇವರನ್ನು ಭಜಿಸುವವನು ನಿಜವಾದ ಅರ್ಥ ದಲ್ಲಿ ಭಕ್ತ ಎನಿಸಿಕೊಳ್ಳುತ್ತಾನೆ. ಇಂತಹ ಭಕ್ತನು ದೇವರನ್ನು ಪಡೆಯಬೇಕು ಎಂಬ ಆದರ್ಶದಿಂದ ದೇವರನ್ನು ಭಜಿಸು ತ್ತಾನೆ. ಈ ದೃಷ್ಟಿಯಿಂದ ಅವನು ಸಾಧಕ ಎನಿಸಿಕೊಳ್ಳು ತ್ತಾನೆ. ಇವನು ಭಕ್ತಿಮಾರ್ಗವನ್ನು ಅನುಸರಿಸುವ ಸಾಧಕ. ಹಾಗೆಯೆ ಜ್ಞಾನಮಾರ್ಗವನ್ನು ಅನುಸರಿಸುವ ಸಾಧಕರು ಇರುತ್ತಾರೆ. ಜೀವನದಲ್ಲಿ ಏನನ್ನಾದರೂ ಸಾಧಿಸಲು ಪ್ರಯತ್ನಿಸು ವವನನ್ನು ಸಾಧಕ ಎಂದು ಕರೆಯಬಹುದು. ವಿಶೇಷ ಅರ್ಥದಲ್ಲಿ ಆಧ್ಯಾತ್ಮಿಕ ಉನ್ನತಿಗಾಗಿ ಸಾಧನೆ ಮಾಡುವವರನ್ನು ಸಾಧಕರು ಎಂದು ಕರೆಯುತ್ತಾರೆ. ಆದ್ದರಿಂದ ಆಧ್ಯಾತ್ಮಿಕ ದೃಷ್ಟಿಯಿಂದ ಭಕ್ತನನ್ನು ಸಾಧಕ ಎಂದೂ ಕರೆಯಬಹುದು.

ಪ್ರಾಪಂಚಿಕ ವಿಷಯಗಳ ಕಡೆ ವೈರಾಗ್ಯ, ಆಂತರಿಕ ತೃಪ್ತಿ ಮತ್ತು ಮನಃಶಾಂತಿ, ನಿಃಸ್ವಾರ್ಥ ಪ್ರೇಮ, ಕಷ್ಟ ಸುಖಗಳಲ್ಲಿ ವಿಚಲಿತವಾಗದ ಮಾನಸಿಕ ಸ್ಥಿರತೆ – ಇವು ಸಾಧನೆಯ ಅಳತೆಗೋಲುಗಳು.

**ಅನಾಸಕ್ತಿಯಿಂದ ಕರ್ಮ ಮಾಡುವುದು ಹೇಗೆ?**

ನಮ್ಮಲ್ಲಿ ಎರಡು ಆದರ್ಶಗಳು ಇರಬೇಕು – ವೈಯಕ್ತಿಕವಾಗಿ ಆಧ್ಯಾತ್ಮಿಕ ಉನ್ನತಿಯನ್ನು ಸಾಧಿಸುವುದು ಮತ್ತು ಜಗತ್ತಿನ ಅಥವಾ ಸಮಾಜದ ಹಿತಕ್ಕಾಗಿ ದುಡಿಯುವುದು. ನಾವು ಮಾಡುವ ಎಲ್ಲ ಕರ್ಮಗಳು ಮತ್ತು ಸಾಧನೆಗಳು ಈ ಆದರ್ಶಕ್ಕೆ ಪೂರಕವಾಗಿರಬೇಕು. ನಮ್ಮಲ್ಲಿ ಈ ಆದರ್ಶಗಳು ಪ್ರಧಾನವಾಗಿದ್ದರೆ, ಪ್ರಾಪಂಚಿಕ ಆಶೋತ್ತರಗಳು ಇಲ್ಲದಿದ್ದರೆ, ನಾವು ನಿಃಸ್ವಾರ್ಥಿಗಳಾಗಿದ್ದರೆ ಆಗ ನಮ್ಮ ಪಾಲಿಗೆ ಬಂದ ಕರ್ಮಗಳನ್ನು ಅನಾಸಕ್ತಿಯಿಂದ ಮಾಡಲು ಸಾಧ್ಯ.

ಯಾವ ಕರ್ಮವೂ ಸಂಪೂರ್ಣವಾಗಿ ನಮ್ಮದಲ್ಲ. ಪ್ರತಿ ಯೊಂದು ಕರ್ಮಕ್ಕೂ ಒಂದು ಸಾಮಾಜಿಕ ಆಯಾಮ ಇರು ತ್ತದೆ. ನಾವು ಹೇಗೆ ಕೆಲಸ ಮಾಡುತ್ತೇವೆ ಅದಕ್ಕನುಗುಣವಾಗಿ ಆ ಕೆಲಸವು ಸಮಾಜದ ಮೇಲೆ ಒಳ್ಳೆಯ ಅಥವಾ ಕೆಟ್ಟ ಪರಿಣಾಮವನ್ನು ಉಂಟುಮಾಡುತ್ತದೆ. ಆದ್ದರಿಂದ ಸಾಮಾಜಿಕ ಪ್ರಜ್ಞೆಯೊಂದಿಗೆ, ಸಾಮಾಜಿಕ ಹಿತದೃಷ್ಟಿಯಿಂದ, ಸಾಮಾಜಿಕ ಜವಾಬ್ದಾರಿಯಿಂದ ಕರ್ಮವನ್ನು ಮಾಡಬೇಕು. ಕೇವಲ ಹಣ ಗಳಿಸುವುದೇ, ವೈಯಕ್ತಿಕ ಆಸೆಗಳನ್ನು ಪೂರ್ತಿ ಗೊಳಿಸುವುದೇ ಕರ್ಮದ ಉದ್ದೇಶವಾಗಿರಬಾರದು. ಈ ರೀತಿ ವೈಯಕ್ತಿಕ ಆಸೆಗಳಿಲ್ಲದೆ ನಮ್ಮ ಪಾಲಿಗೆ ಬಂದ ಕರ್ಮಗಳನ್ನು

ಮಾಡುತ್ತಾ ಹೋದರೆ ಕ್ರಮೇಣ ಮನಸ್ಸು ಪರಿಶುದ್ಧವಾಗುತ್ತಾ ಬರುತ್ತದೆ. ಮನಸ್ಸು ಪರಿಶುದ್ಧವಾದಷ್ಟೂ ನಾವು ಭಗವಂತನಿಗೆ ಸಮೀಪರಾಗುತ್ತೇವೆ. ಇದೇ ಆಧ್ಯಾತ್ಮಿಕ ಉನ್ನತಿ. ಇದು ನಮ್ಮ ಜೀವನಕ್ಕೆ ಒಂದು ಸಾರ್ಥಕತೆಯನ್ನು ನೀಡುತ್ತದೆ. ಹೀಗೆ ಆಧ್ಯಾತ್ಮಿಕ ಉನ್ನತಿ ಮತ್ತು ಜಗತ್ತಿನ ಹಿತ– ಈ ಎರಡು ಆದರ್ಶಗಳು ನಮ್ಮ ಮುಂದೆ ಇದ್ದರೆ ಆಗ ಅನಾಸಕ್ತಿಯಿಂದ ಕರ್ಮ ಮಾಡುವುದು ಸಾಧ್ಯವಾಗುತ್ತದೆ.

**ಸತ್ಸಂಗವೆಂದರೆ ಜನಸಮೂಹ ಬೇಕೆ? ಮಾನಸಿಕವಾಗಿಯೂ ಸತ್ಸಂಗ ಹೇಗೆ ಮಾಡಬಹುದು?**

ಸತ್ಸಂಗವನ್ನು ನಾಲ್ಕು ರೀತಿಯಲ್ಲಿ ಅರ್ಥೈಸಬಹುದು: ಸಜ್ಜನರ ಸಂಗ, ಸತ್ಸ್ವರೂಪನಾದ ಭಗವಂತನ ಸಂಗ, ಸದ್ಭಾವನೆಗಳ ಸಂಗ, ಮತ್ತು ಸತ್ಕಾರ್ಯಗಳ ಸಂಗ. ಸಜ್ಜನರು ಎಂದರೆ ಸನ್ಮಾರ್ಗದಲ್ಲಿ ನಡೆಯುವವರು. ಇಂಥವರ ಸಂಗ ಮತ್ತು ಮಾರ್ಗದರ್ಶನ ನಮ್ಮ ಜೀವನದಲ್ಲಿ ಭರವಸೆಯನ್ನು ಮೂಡಿಸುತ್ತವೆ. ಸನ್ಮಾರ್ಗದಲ್ಲಿ ನಡೆಯಲು ಸ್ಫೂರ್ತಿಯನ್ನು ನೀಡುತ್ತವೆ. ಅವರ ಸಚ್ಚಿಂತನೆ ಅವರ ಸುತ್ತ ಒಳ್ಳೆಯ ವಾತಾವರಣವನ್ನು ನಿರ್ಮಿಸುತ್ತದೆ. ಆದ್ದರಿಂದ ಅವರ ಸಾನ್ನಿಧ್ಯ ನಮ್ಮ ಮೇಲೆ ಸತ್ಪ್ರಭಾವವನ್ನು ಬೀರುತ್ತದೆ. ಹೊರಗಿನ ಅನೇಕ ಕೆಟ್ಟ ಪ್ರಭಾವಗಳಿಗೆ ನಾವು ಒಳಗಾಗುತ್ತಿರುತ್ತೇವೆ. ಇದನ್ನು ಹೋಗಲಾಡಿಸಲು ಸಜ್ಜನರ ಸಂಗ ಬಹಳ ಸಹಾಯಕಾರಿ.

ಸತ್ ಸ್ವರೂಪನಾದ ಭಗವಂತನ ಸಂಗದಲ್ಲಿ ಇರುವುದೆಂದರೆ, ಭಗವಂತನ ನಾಮೋಚ್ಚಾರಣೆಯ ಮೂಲಕ, ಪ್ರಾರ್ಥನೆಯ ಮೂಲಕ, ಅವನ ಸ್ಮರಣೆಯ ಮೂಲಕ, ಎಲ್ಲವನ್ನೂ ಅವನಿಗೆ ಸಂಬಂಧಿಸುವುದರ ಮೂಲಕ ಯಾವಾಗಲೂ ಅವನ ಸಾನ್ನಿಧ್ಯದಲ್ಲಿ ಇರಲು ಪ್ರಯತ್ನಿಸುವುದು. ಇದರಿಂದ ಮಾನಸಿಕ ಸತ್ಸಂಗವಾದಂತಾಗುತ್ತದೆ.

ಯಾವಾಗಲೂ ಸದ್ವಿಚಾರಗಳಲ್ಲಿ ಮನಸ್ಸನ್ನು ತೊಡಗಿಸುವುದರ ಮೂಲಕವೂ ಮಾನಸಿಕ ಸತ್ಸಂಗವಾಗುತ್ತದೆ. ಮನಸ್ಸಿನಲ್ಲಿ ಕಾಮಕ್ರೋಧಾದಿ ನಿಷೇಧಾತ್ಮಕ ಭಾವಗಳಿಗೆ ಅವಕಾಶ ಕೊಡದೆ ಎಲ್ಲರ ಹಿತಚಿಂತನೆ ಮತ್ತು ಎಲ್ಲರಿಗಾಗಿ ಪ್ರಾರ್ಥನೆ ಮಾಡುವ ಮೂಲಕವೂ ಉತ್ತಮ ಸತ್ಸಂಗವಾಗುತ್ತದೆ. ಇತರರ ಪ್ರತಿಯೊಂದು ಕ್ರಿಯೆಯಲ್ಲಿಯೂ ನಡೆನುಡಿಗಳಲ್ಲಿಯೂ ದೋಷವನ್ನೇ ನೋಡುವುದರಿಂದ ನಾವು ದುಷ್ಟ ಸಹವಾಸದಲ್ಲಿರುತ್ತೇವೆ. ಇದರಿಂದ ನಾವೂ ಮನಶ್ಶಾಂತಿಯನ್ನು ಕಳೆದುಕೊಳ್ಳುವುದರ ಜೊತೆಗೆ ಇತರರ ಮನಸ್ಸನ್ನೂ ನೋಯಿಸುತ್ತೇವೆ ಮತ್ತು ಕುಟುಂಬ ಹಾಗೂ ಸಂಸ್ಥೆಗಳಲ್ಲಿ ಅತೃಪ್ತ ವಾತಾವರಣವನ್ನು ಸೃಷ್ಟಿಸುತ್ತೇವೆ. ಇದರ ಬದಲು ಇತರರಿಗಾಗಿ ಪ್ರಾರ್ಥಿಸುವುದರ ಮೂಲಕ, ಇತರರ ಹಿತಚಿಂತನೆಯ ಮೂಲಕ ಒಂದು ಹಿತವಾದ ವಾತಾವರಣವನ್ನು ಸೃಷ್ಟಿಸಲು ಸಾಧ್ಯವಾಗುತ್ತದೆ. ಇಂತಹ ವಾತಾವರಣದಲ್ಲಿರುವುದೇ ಒಂದು ಶ್ರೇಷ್ಠ ಸತ್ಸಂಗವಾಗುತ್ತದೆ.

ಕಡೆಯದಾಗಿ ಸತ್ಕಾರ್ಯಗಳ ಸಂಗ. ನಾವು ಯಾವಾಗಲೂ ಸತ್ಕಾರ್ಯಗಳಲ್ಲಿ ತೊಡಗಿದ್ದರೆ ಅವು ನಮ್ಮ ಮನಸ್ಸಿನ ಮೇಲೆ ಉತ್ತಮ ಸಂಸ್ಕಾರಗಳನ್ನು ಉಂಟು ಮಾಡುತ್ತವೆ. ಆ ಸಂಸ್ಕಾರಗಳು ಮತ್ತೆ ಸತ್ಕಾರ್ಯಗಳಲ್ಲಿ ತೊಡಗುವಂತೆ ನಮಗೆ ಪ್ರೇರಣೆಯನ್ನು ನೀಡುತ್ತವೆ. ಹೀಗೆ ಸತ್ಕಾರ್ಯ ಸಚ್ಚಿಂತನೆಗಳ ಮೂಲಕ ನಮ್ಮ ಸುತ್ತ ಒಂದು ಸತ್ ಸ್ಪಂದನವನ್ನು ಸೃಷ್ಟಿಸುತ್ತೇವೆ. ಇದರಿಂದ ನಾವು ಯಾವಾಗಲೂ ಸತ್ಸಂಗದಲ್ಲಿ ಇರುವಂತೆ ಆಗುತ್ತಗೆ. ಆಗ ಏಕಾಂತವೂ ಒಂದು ಸತ್ಸಂಗವಾಗುತ್ತದೆ.

**(ಪ್ರಶ್ನೆಗಳು ಶ್ರೀಮತಿ ಲಲಿತಾ ಕೃಷ್ಣಮೂರ್ತಿ, ಮೈಸೂರು ಅವರವು)**

## ಪ್ರಹಸನ ಪ್ರಸಂಗ

ಒಬ್ಬ ಕಳ್ಳನನ್ನು ನ್ಯಾಯಾಲಯಕ್ಕೆ ಕರೆತರಲಾಯಿತು. ಅವನನ್ನು ಕಂಡ ಕೂಡಲೇ ನ್ಯಾಯಾಧೀಶರು ಬೇಸತ್ತು, ಕೋಪದಿಂದ ಹೇಳಿದರು, "ಏನಯ್ಯಾ, ಎಂಥ ವ್ಯಕ್ತಿ ನೀನು? ಇದೇ ನ್ಯಾಯಲಯದಲ್ಲಿ ನಿನಗೆ ಶಿಕ್ಷೆಯನ್ನು ವಿಧಿಸುತ್ತಿರುವುದು, ಅದೂ ನನ್ನಿಂದಲೇ ಒಂಬತ್ತನೇ ಸಲ! ನಿನಗೆ ನಾಚಿಕೆಯಾಗುವುದಿಲ್ಲವೇ?" ಕಳ್ಳ ವಿನಯದಿಂದ ಹೇಳಿದ, "ಮಹಾಸ್ವಾಮಿ, ನಿಮಗೆ ಬಡ್ತಿ ದೊರೆಯದಿದ್ದರೆ ಅದಕ್ಕೆ ನಾನು ಹೊಣೆಯಲ್ಲ!"

❖ ❖ ❖

ಒಬ್ಬ ವ್ಯಕ್ತಿ ರಸ್ತೆಯ ಬದಿಯಲ್ಲಿ ಹಲವಾರು ಮೆದುಳುಗಳನ್ನು ಶೀಷೆಯಲ್ಲಿಟ್ಟುಕೊಂಡು ಮಾರುತ್ತಿದ್ದ. ಒಬ್ಬ ವ್ಯಕ್ತಿ ಅವನಲ್ಲಿಗೆ ಬಂದು ಅವುಗಳ ಬೆಲೆಯನ್ನು ವಿಚಾರಿಸಿದ. ಅಮೆರಿಕನ್ನನ ಮೆದುಳಿಗೆ ಒಂದು ಸಾವಿರ, ಜಪಾನಿಯನ ಮೆದುಳಿಗೆ ಐದು ಸಾವಿರ, ಚೀನೀಯರ ಮೆದುಳಿಗೆ ಎರಡು ಸಾವಿರ ಎಂದು ದರಗಳನ್ನು ಹೇಳುತ್ತಾ ಹೋದ ಮಾರುವ ವ್ಯಕ್ತಿ. ಕಡೆಯದಾಗಿ ಒಂದು ಶೀಷೆಯನ್ನು ತೋರಿಸುತ್ತ, "ಇದು ಗಾಂಪನ ಮೆದುಳು. ಇದಕ್ಕೆ ಒಂದು ಲಕ್ಷ ರೂಪಾಯಿ ಬೆಲೆ" ಎಂದು ಹೇಳಿದ. ಕೊಂಡುಕೊಳ್ಳುವವನು ಹೌಹಾರಿದ, "ಒಂದು ಲಕ್ಷವೇ! ಅದೇನಪ್ಪ ಅಷ್ಟೊಂದು ವಿಶೇಷ?" ಮಾರುವವ ಹೇಳಿದ, "ಸಾರ್, ಇದು ಒಮ್ಮೆಯೂ ಉಪಯೋಗವಾಗಿಲ್ಲ, ಅಪ್ಪಟ ಮಾಲು."

❖ ❖ ❖

ಹುದ್ದೆಗಾಗಿ ಒಬ್ಬ ವ್ಯಕ್ತಿ ಒಂದು ಪರೀಕ್ಷೆಯನ್ನು ಬರೆಯಬೇಕಾಗಿತ್ತು. ಆ ಪರೀಕ್ಷೆಯಲ್ಲಿ ಅವನಿಗೆ ಒಂದು ಪ್ರಶ್ನೆಯನ್ನು ಕೇಳಲಾಗಿತ್ತು: "ಏಸುಕ್ರಿಸ್ತ, ಬುದ್ಧ ಮತ್ತು ಗಾಂಧಿ – ಇವರಲ್ಲಿರುವ ಸಮಾನ ಅಂಶ ಯಾವುದು?" ಈ ಭೂಪ ಉತ್ತರ ಬರೆದ, 'ಅವರೆಲ್ಲರೂ ರಾಷ್ಟ್ರೀಯ ರಜಾದಿನಗಳಂದು ಜನಿಸಿದರು!'

❖ ❖ ❖

**ಸೈನಿಕ :** ಸರ್, ಎಲ್ಲೆಡೆ ಶತ್ರು ಸೈನಿಕರು ನಮ್ಮನ್ನು ಸುತ್ತುವರೆದಿದ್ದಾರೆ! ನಾವು ಸತ್ತೆವು!

**ಮೇಜರ್ (ಗಾಂಪ):** ಬಹಳ ಒಳ್ಳೆಯದು. ನಾವು ಯಾವ ಕಡೆ ಬೇಕಾದರೂ ದಾಳಿ ನಡೆಸಬಹುದು!